# ಈಸಬೇಕು ಇದ್ದು ಜಯಿಸಬೇಕು

**( Ref.:**
https://raocollectionssongs.blogspot.com/search/label/%E0%B2%88%E0%B2%B8%E0%B2%AC%E0%B3%87%E0%B2%95%E0%B3%81%20%E0%B2%87%E0%B2%A6%E0%B3%8D%E0%B2%A6%E0%B3%81%20%E0%B2%9C%E0%B3%88%E0%B2%B8%E0%B2%AC%E0%B3%87%E0%B2%95%E0%B3%81%20purandara%20vittala )

ಪುರಂದರ ದಾಸರದು ಬರೆದು ಕಟ್ಟಿಡುವ ಸಾಹಿತ್ಯವಲ್ಲ. ದೇಶ ಕಾಲದ ಸಾಣಿಕಲ್ಲ ಮೇಲೆ ಅನುಭವದ ಕೊರಡು ತೇಯ್ದ ಗಂಧ. ಮಧುಕರ ವೃತ್ತಿಯಿಂದ 'ಮುತ್ತು ಬಂದಿದೆ ಕೊಳ್ಳಿರೋ' ಎಂದು ಹಾಡಿದರೆ ಮನೆ ಮನ ಎರಡೂ ತುಂಬಿದವು.

ಈಸಬೇಕು ಇದ್ದು ಜಯಿಸಬೇಕು ಎಂಬುದು ಅವರ ಪ್ರೇರಣಾದಾಯಿ ವಾಕ್ಯ.

ಜೀವನ ಮತ್ತು ಸಮಸ್ಯೆಗಳಿಗೂ ಗೇರು ಮತ್ತು ಬೀಜದ ಸಂಬಂಧ. ಕಷ್ಟಗಳೆಂಬ ಗೇರಿನಿಂದ ಹೊರಬಂದಾಗ ಗೋಡಂಬಿ.
ಹೀಗೆ ಸಮಸ್ಯೆಗಳನ್ನು ಎದುರಿಸಿ ಗೆಲ್ಲಬೇಕು. ಓಡಿ ಹೋಗಬಾರದು. ಹೊರಹೋಗುವ ವಿಚಾರ ಮಾಡದೆ ಕೊಳೆಸಿ ಮದ್ಯವಾಗಬಾರದು.

ಆತ್ಮಹತ್ಯೆಗೆ ಶರಣಾಗುವ ಎಷ್ಟೋ ಜನರು ಒಂದು ಬಾರಿ ಮುಂದಕ್ಕೆ ಹಾಕಿದರೆ ನೂರು ವರ್ಷ ಆಯಸ್ಸು. ಸಮಸ್ಯೆ ಅವಮಾನ ವ್ಯಾಧಿ ಮನುಷ್ಯರಿಗೆ ಆಗದೇ ಮರಕ್ಕಾ? ಸಣ್ಣ ವಿಷಯಕ್ಕೆ ದುಡಿಕಿ ಸರಿಪಡಿಸಲಾಗದ ಘಾಸಿ ಮಾಡಿ ಎದ್ದು ಹೋದವರಿದ್ದಾರೆ.

ಅತಿ ಸಣ್ಣ ವಿಷಯಕ್ಕೆ ಮನಸ್ತಾಪಕ್ಕೆ ಡೈವೋರ್ಸ್ ಕೊಟ್ಟು ಕೊಳ್ಳುವ ನಿರ್ಧಾರ ಮಾಡಿದವರಿದ್ದಾರೆ.

ದಾಸರು ಪರಿ ಪರಿಯಿಂದ ಹೇಳಿದ್ದು ಈಸಬೇಕು ಇದ್ದು ಜಯಿಸಬೇಕು.

ಸಮಸ್ಯೆಗಳು ಎಲ್ಲಿಲ್ಲ? ಕೆಲಸದಲ್ಲಿ, ಕುಟುಂಬದಲ್ಲಿ, ಜೀವನದಲ್ಲಿ ಸಮಾಜದಲ್ಲಿ, ಧರ್ಮದಲ್ಲಿ, ದೇಶದಲ್ಲಿ, ಪ್ರಪಂಚದಲ್ಲಿ ಎಲ್ಲಾಕಡೆ ಇವೆ. ಮನುಷ್ಯ ಮತ್ತು ಸಮಸ್ಯೆಗಳ ಸಂಬಂಧ ಮೀನು ನೀರಿನಂತೆ. ನೀರೊಳಗೆ ಇರಬೇಕು ಕೊಳೆ ತೊಳೆಯಬೇಕು.

ಮೀನುಗಾರ ತೋರಿಸಿದ ಗಾಳದ ತುದಿಯ ಮಳೆಹುಳುವಿಗೆ ಮರುಳಾಗಬಾರದು, ಮತಾಂತರವಾಗಬಾರದು. ದೇಶ ಬಿಡುತ್ತೇನೆ ಎನಬಾರದು. ಸೋಡ ಚೀಟಿ ಕೊಡುವ ವಿಚಾರ ಮಾಡಬಾರದು. ಎಲ್ಲವುಗಳನ್ನು ಎದುರಿಸಿ ಈಸಿ ನಮ್ಮ ದಡ ತಲುಪಿ ಜಯಿಸಬೇಕು.

ಸಾಧಿಸಲು ಒಂದು ಸಣ್ಣ ಅವಕಾಶ ಇದ್ದಾಗಲೂ ನಿವೃತ್ತಿ ಮಾರ್ಗ ಸಲ್ಲ. ತುಂಬು ಬಾಳು ಇದ್ದು ಸಾಮ, ದಾನ, ದಂಡ, ಬೇಧ ಇವುಗಳಿಂದ ಗೆದ್ದು ಈಸಬೇಕು ಇದ್ದು ಜಯಿಸಬೇಕು ಎಂಬುದು ದಾಸರ ಸಂದೇಶ.

******